# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 373**
**ಸದಸ್ಯರ ಹೆಸರು : ಶ್ರೀ ಶಶಿಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ : 15.12.2021**
**ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು**

| ಪ್ರಶ್ನೆ | ಉತ್ತರ |
|---|---|
| **(ಅ)** ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವರ ಗ್ರಾಮದಲ್ಲಿ ಎಷ್ಟು ಸಾರಿ ಭೂಕಂಪ ಸಂಭವಿಸಿದೆ ಹಾಗೂ ಇದರಿಂದ ಆಗಿರುವ ಹಾನಿ ಎಷ್ಟು; (ವಿವರ ಒದಗಿಸುವುದು) | ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವರ ಗ್ರಾಮದಲ್ಲಿ KSNDMC Seismic Monitoring Stations Network ಪ್ರಕಾರ ಎರಡು ಭಾರಿ ಭೂ ಕಂಪನವಾಗಿದೆ,<br>1) 11:10:2021:21:55:18, 1.6 KM NNE of Gadikeshwar Gp, Chincholi Taluk, Magnitude-4.0, Depath-5.0 KM,<br>2) 12:10:2021:08:18:51 1.5 KMs SE of gadikeshwar GP, Chincholi Taluk, Magnitude-2.8, Depath-8.0 KM<br>ಇದರಿಂದ ಸದರಿ ಗ್ರಾಮದಲ್ಲಿ 5 ಮನೆಗಳು ಅಲ್ಪಪ್ರಮಾಣದಲ್ಲಿ ಹಾನಿಯಾಗಿದ್ದು ಈಗಾಗಲೇ ಸಂಬಂಧಿಸಿದ ಫಲಾನುಭವಿಗಳಿಗೆ NDRF/SDRF ಮಾರ್ಗಸೂಚಿನ್ವಯ ಪರಿಹಾರ ವಿತರಿಸಲಾಗಿದೆ. |
| **(ಆ)** ಗಡಿಕೇಶ್ವರ ಗ್ರಾಮದಲ್ಲಿ ಭೂ ಕಂಪನದಿಂದ ಹಾನಿಗೆ ಒಳಗಾದ ಜನರಿಗೆ ಸರ್ಕಾರದಿಂದ ಒದಗಿಸಿರುವ ಪರಿಹಾರಗಳೇನು; (ವಿವರ ಒದಗಿಸುವುದು) | ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವರ ಗ್ರಾಮದ ಜನರು ಭಯಭೀತರಾಗಿರುವುದರಿಂದ ಅವರ ಬೇಡಿಕೆಯಂತೆ 853 ಮನೆಗಳ ಮುಂದೆ ತಾತ್ಕಾಲಿಕವಾಗಿ ಟಿನ್ ಶೆಡ್ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕೋರಿರುತ್ತಾರೆ. ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನುಸಾರ ತಾತ್ಕಾಲಿಕ ಶೆಡ್ ನಿರ್ಮಾಣ ಮಾಡಲು ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಅವಕಾಶವಿರುವುದಿಲ್ಲ. |
| **(ಇ)** ಈ ಭೂಕಂಪನಕ್ಕೆ ಕಾರಣಗಳೇನು ಎಂಬುದರ ಬಗ್ಗೆ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಲಾಗಿದೆಯೇ; ಹಾಗೂ ಭಯಭೀತಿ ಜನತೆಗೆ ಸೂಕ್ತ ಮಾರ್ಗದರ್ಶನ ಸಾಂತ್ವನ ಒದಗಿಸಲಾಗಿದೆಯೇ? | ಕಲಬುರಗಿ ಜಿಲ್ಲೆಯ ಚಿಂಚೋಳಿ ಮತ್ತು ಕಾಳಗಿ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಪದೇ ಪದೇ ಭೂ ಕಂಪನ ಸಂಭವಿಸುತ್ತಿರುವ ಬಗ್ಗೆ, ಹೈದ್ರಾಬಾದ್, ದೆಹಲಿ, ಬೆಂಗಳೂರುನಿಂದ ವಿಶೇಷ ಪರಿಣಿತಿಯುಳ್ಳ ಗಣಿ ಮತ್ತು ಭೂ ವಿಜ್ಞಾನಿಗಳನ್ನು ಒಳಗೊಂಡ ತಂಡ ದಿನಾಂಕ:08.11.2021 ಮತ್ತು ದಿನಾಂಕ:09.11.2021 ರಂದು ಭೂ ಕಂಪನ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಿ ಭೂ ಕಂಪನ ಕುರಿತು ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಅದರಂತೆ, ಜನರಿಗೆ ಭೂಕಂಪನಕ್ಕೆ ಕಾರಣಗಳ ಕುರಿತು ತಿಳುವಳಿಕೆಯನ್ನು ನೀಡಲಾಗಿದೆ. |

ಕಂಇ 531 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು